ಕರ್ನಾಟಕಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಛೇರಿ ಐವನ-ಎ-ಶಾಹಿ ಬಡಾವಣೆ ಕಲಬುರಗಿ**

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಶಿ/ವರ್ಗಾವಣೆ/52/2021-22 ದಿನಾಂಕ:22-11-2021.

**ಜ್ಞಾಪನ**

ವಿಷಯ:- 2020-21ನೇ ಸಾಲಿಗೆ ಸಂಬಂಧಿಸಿದಂತೆ ದಿನಾಂಕ:24-11-2021 ರಿಂದ 02-12-2021ರ ವರೆಗೆ ನಡೆಯಲಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಸಾಮಾನ್ಯ ಕೋರಿಕೆ ವರ್ಗಾವಣೆಗೆ ಕೌನ್ಸಲಿಂಗ್‌ಗೆ ಶಿಕ್ಷಕರು ಹಾಜರಾಗುವ ಕುರಿತು.

ಉಲ್ಲೇಖ:- ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ:ಶಿ.ವ.ಕೋಶ.ಸಾ.ವ/01/2020-21 ದಿನಾಂಕ:30-06-2021 ಹಾಗೂ 21-10-2021

&&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020-21ನೇ ಸಾಲಿಗೆ ನಡೆಯಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಎಲ್ಲಾ ವೃಂದದ ಶಿಕ್ಷಕರ ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಆದ್ಯತಾ ಪಟ್ಟಿ ಬಿಡುಗಡೆ ಮಾಡಲಾಗಿತ್ತು. ಅದರಂತೆ ಮುಂದುವರೆದು ಪ್ರಸ್ತುತ ಅಂತಿಮ ಅದ್ಯತಾ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿದ್ದು ಬಿಡುಗಡೆ ಮಾಡಲಾದ ಪಟ್ಟಿಯನ್ನು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದೆ. ಅದರಂತೆ ದಿನಾಂಕ:24-11-2021 ರಿಂದ 02-12-2021ರ ವರೆಗೆ ಈ ಕೆಳಕಂಡ ಅದ್ಯತಾ ಪಟ್ಟಿಯ ಕ್ರಮ ಸಂಖ್ಯೆಯಂತೆ ಹಾಗೂ ಕ್ರಮ ಸಂಖ್ಯೆಯ ಮುಂದೆ ತೋರಿಸಿದ ದಿನಾಂಕದಂತೆ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಅನುಕ್ರಮವಾಗಿ ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸುವಂತೆ ತಿಳಿಸಿದೆ.

**<u>ದಿನಾಂಕ:24-11-2021 ರಿಂದ 02-12-2021ರ ವರೆಗೆ ನಡೆಯಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ಸಂಪೂರ್ಣ ವೇಳಾ ಪಟ್ಟಿ ವಿವರ ಈ ಕೆಳಗಿನಂತಿದೆ.</u>**

ದಿನಾಂಕ:11-11-2020ರ ಅಧಿಸೂಚನೆಯಂತೆ ಮತ್ತು ಈಗಾಗಲೇ ಪ್ರಕಟಿಸಿದ ಅಂತಿಮ ಅದ್ಯತಾ ಪಟ್ಟಿಯಂತೆ ಪ್ರಾಥಮಿಕ ಶಾಲಾ ಎಲ್ಲಾ ವೃಂದದ ಶಿಕ್ಷಕರ ಸಾಮಾನ್ಯ ಕೋರಿಕೆ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೇ ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇಲ್ಲಿ ನಡೆಯಲಿದೆ. ಸದರಿ ಕೌನ್ಸಲಿಂಗ್‌ಗೆ ಶಿಕ್ಷಕರು ಈ ಕೆಳಗಿನ ವೇಳಾ ಪಟ್ಟಿಯಂತೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ. ಕೌನ್ಸಿಲಿಂಗ ಸಮಯ ಬೆಳಿಗ್ಗೆ 10.00 ಘಂಟೆ

| ಕ್ರಮ ಸಂಖ್ಯೆ | ವಿವರ | ದಿನಾಂಕ | ಆದ್ಯತಾ ಪಟ್ಟಿಕ್ರಮ ಸಂಖ್ಯೆ |
|---|---|---|---|
| 01 | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು | 24.11.2021 | 1 ರಿಂದ ಮುಕ್ತಾಯವಾಗುವವರೆಗೆ |
| 02 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 24.11.2021 | 1 ರಿಂದ 87 |
| 03 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 25.11.2021 | 88 ರಿಂದ 300 |
| 04 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 26.11.2021 | 301 ರಿಂದ 600 |
| 05 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 27.11.2021 | 601 ರಿಂದ 1200 |
| 06 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 28.11.2021 | 1201 ರಿಂದ ಮುಕ್ತಾಯವಾಗುವವರೆಗೆ |
| 07 | ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕಣ ಶಿಕ್ಷಕರು | 29.11.2021 | 1 ರಿಂದ ಮುಕ್ತಾಯವಾಗುವವರೆಗೆ |
| 08 | ಪ್ರಾಥಮಿಕ ಶಾಲಾ ವಿಶೇಷ ಶಿಕ್ಷಕರು | 29.11.2021 | 1 ರಿಂದ ಮುಕ್ತಾಯವಾಗುವವರೆಗೆ |

ಮು.ತಿ.ಪು.........

**ದಿನಾಂಕ:24-11-2021 ರಿಂದ 02-12-2021ರ ವರೆಗೆ ನಡೆಯಲಿರುವ ಪ್ರೌಢ ಶಾಲಾ ಶಿಕ್ಷಕರ ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ಸಂಪೂರ್ಣ ವೇಳಾ ಪಟ್ಟಿ ವಿವರ ಈ ಕೆಳಗಿನಂತಿದೆ.**

ದಿನಾಂಕ:11-11-2020ರ ಅಧಿಸೂಚನೆಯಂತೆ ಹಾಗೂ ಅಂತಿಮ ಆದ್ಯತಾ ಪಟ್ಟಿಯಂತೆ ಪ್ರೌಢ ಶಾಲೆಯ ಎಲ್ಲಾ ವೃಂದದ ಶಿಕ್ಷಕರ ಜಿಲ್ಲೆಯೊಳಗಿನ ಸಾಮಾನ್ಯ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೇ ದಿನಾಂಕ:24-11-2021 ರಿಂದ 02-12-2021ರ ವರೆಗೆ ಬಿ.ಆರ್.ಸಿ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ(ದ.ವ) ಇಲ್ಲಿ ನಡೆಯಲ್ಲಿದ್ದು. ಸದರಿ ಕೌನ್ಸಲಿಂಗ್‌ಗೆ ಶಿಕ್ಷಕರು ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ. ಕೌನ್ಸಿಲಿಂಗ ಸಮಯ ಬೆಳಿಗ್ಗೆ 10.00 ಘಂಟೆ

| ಕ್ರಮ ಸಂಖ್ಯೆ | ವಿವರ | ದಿನಾಂಕ | ಆದ್ಯತಾ ಪಟ್ಟಿಕ್ರಮ ಸಂಖ್ಯೆ |
|---|---|---|---|
| 01 | ಪ್ರೌಢ ಶಾಲಾ ಸಹ ಶಿಕ್ಷಕರು | 24.11.2021 | 1 ರಿಂದ 150 |
| 02 | ಪ್ರೌಢ ಶಾಲಾ ಸಹ ಶಿಕ್ಷಕರು | 25.11.2021 | 151 ರಿಂದ 350 |
| 03 | ಪ್ರೌಢ ಶಾಲಾ ಸಹ ಶಿಕ್ಷಕರು | 26.11.2021 | 351 ರಿಂದ ಮುಕ್ತಾಯವಾಗುವರೆಗೆ |
| 04 | ಪ್ರೌಢ ಶಾಲಾ ದೈಹಿಕ ಶಿಕ್ಷಕರು | 27.11.2021 | 1 ರಿಂದ ಮುಕ್ತಾಯವಾಗುವರೆಗೆ |
| 05 | ಪ್ರೌಢ ಶಾಲಾ ವಿಶೇಷ ಶಿಕ್ಷಕರು | 27.11.2021 | 1 ರಿಂದ ಮುಕ್ತಾಯವಾಗುವರೆಗೆ |

**ವಿಶೇಷ ಸೂಚನೆ:-**

1) ಈಗಾಗಲೇ ಪ್ರಕಟಿಸಲಾದ ಆದ್ಯತಾ ಪಟ್ಟಿಯು ಸೇವಾ ಪುಸ್ತಕದಂತೆ ನೊಂದಾಯಿಸಲಾದ ಇ.ಇ.ಡಿ.ಎಸ್ ಮಾಹಿತಿಯನ್ನಾಧರಿಸಿ ಹಾಗೂ ಶಿಕ್ಷಕರು ಸಲ್ಲಿಸಿರುವ ವರ್ಗಾವಣೆ ಅರ್ಜಿ ಆಧರಿಸಿ ನಿಯಮಾನುಸಾರ ಪ್ರಕಟಗೊಂಡಿರುತ್ತದೆ. ಅದಾಗ್ಯೂ ಕೂಡಾ ಶಿಕ್ಷಕರ ನೇಮಕಾತಿ ಆದೇಶದಂತೆ ವಿಷಯ ಹೊಂದಾಣಿಕೆ ಹಾಗೂ ಪ್ರಸ್ತುತ ಶಾಲೆಯಲ್ಲಿ ಕನಿಷ್ಠ ಪರಿಶೀಲಿಸಿದ ನಂತರವೇ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು. ಯಾಗದೇ ಮಾಹಿತಿ ವ್ಯತಿರಿಕ್ತ ಇದ್ದ ಪಕ್ಷದಲ್ಲಿ ಶಿಕ್ಷಕರಿಗೆ ಕೌನ್ಸಲಿಂಗಗೆ ಅವಕಾಶ ಕಲ್ಪಿಸಲಾಗುವುದಿಲ್ಲ.
2) ವೈದ್ಯಕೀಯ ತಪಾಷಣೆಗೆ ಒಳಪಡಿಸಲಾದ ಶಿಕ್ಷಕರ ನೈಜತೆಯು ಅನರ್ಹತೆ ಹೊಂದಿದಲ್ಲಿ ಮತ್ತು ವೈದ್ಯಕೀಯ ತಪಾಸಣೆಗೆ ಶಿಕ್ಷಕರು ಗೈರುಹಾಜರಾಗಿದ್ದಲ್ಲಿ ವರ್ಗಾವಣೆ ಕೋರಿದ ಶಿಕ್ಷಕರಿಗೆ ಕೌನ್ಸಿಲಿಂಗ್‌ಗೆ ಅವಕಾಶ ಕಲ್ಪಿಸಲಾಗುವುದಿಲ್ಲ. ಹಾಗೂ ವೈದ್ಯಕೀಯ ಕಾರಣಗಳಿಗಾಗಿ ಅರ್ಜಿ ಸಲ್ಲಿಸಿದ ಶಿಕ್ಷಕರುಗಳ ಹೆಸರುಗಳು ವೈದ್ಯಕೀಯ ತಪಾಸಣೆಯಲ್ಲಿ ಬಿಟ್ಟು ಹೋದಲ್ಲಿ ಅಂತಹ ಶಿಕ್ಷಕರ ಹೆಸರುಗಳನ್ನು ಸೇರ್ಪಡೆ ಮಾಡಲು ದಿನಾಂಕ:18-11-2021ರ ಹಾಗೂ 22/11/2021 ರಂದು ಅವಕಾಶ ಕಲ್ಪಿಸಲಾಗಿತ್ತು. ಆದರೆ ಪ್ರಸ್ತತ ಕೌನ್ಸಿಲಿಂಗ ಸಮಯದಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
3) ವರ್ಗಾವಣೆ ತಂತ್ರಾಶದಲ್ಲಿ ಶಿಕ್ಷಕರು ತಪ್ಪು ಮಾಹಿತಿ ಭರ್ತಿ ಮಾಡಿದ ಕಾರಣ ವರ್ಗಾವಣೆ ಪ್ರಕ್ರಿಯೆಯಲ್ಲಿ ಲೋಪ ದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.
4) ಶಿಕ್ಷಕರು ದಿನಾಂಕ:24-11-2021 ರಿಂದ 02-12-2021ರ ವರೆಗೆ ನಡೆಯಲಿರುವ ಕೋರಿಕೆ ವರ್ಗಾವಣೆ ಸಮಯದಲ್ಲಿ ಶಿಕ್ಷಕರು ವರ್ಗಾವಣೆ ಅರ್ಜಿ, ಮತ್ತು ಆದ್ಯತೆ ಬಯಸಿದಲ್ಲಿ ಅದರ ಒಂದು ಸೆಟ್ ಝರಾಕ್ಸ ಪ್ರತಿ ಹಾಗೂ ಸೇವಾ ದೃಢೀಕರಣ ಪ್ರಮಾಣ ಪತ್ರ, ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
5) ಕೋರಿಕೆ ವರ್ಗಾವಣೆ ಮಾರ್ಗಸೂಚಿಯಲ್ಲಿ ಸೂಚಿಸಿದಂತೆ ವೃಂದವಾರು ಗರಿಷ್ಠ 7% ವರ್ಗಾವಣೆ ತಲುಪಿದಲ್ಲಿ ವರ್ಗಾವಣೆ ಪ್ರಕ್ರೀಯೆ ಅದೇ ಹಂತದಲ್ಲಿ ಮುಕ್ತಾಯಗೊಳ್ಳಲಾಗುವುದು.

(ಮಾನ್ಯ ಉಪನಿರ್ದೇಶಕರಿಂದ ಅನುಮೂದಿತ ಕರಡು)

22/11

ರಾಜ್ಯ ಪತ್ರಾಂಕಿತ ಸಹಾಯಕರು
ಉಪನಿರ್ದೇಶಕರು (ಆಡಳಿತ) ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ

ಇವರಿಗೆ,
ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ ಜೇವರ್ಗಿ, ಕಲಬುರಗಿ(ಉ.ವ) ಕಲಬುರಗಿ(ದ.ವ), ಸೇಡಂ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು
1] ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ
2] ಮಾನ್ಯ ವಿಭಾಗೀಯ ಜಂಟಿ ನಿರ್ದೇಶಕರು ಮತ್ತು ವರ್ಗಾವಣೆ ಪ್ರಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ಮಾಹಿತಿಗಾಗಿ ಸಲ್ಲಿಸಿದೆ.